# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 53 ರನ್ವಯ "ರೇಷ್ಮೆ ಪರೀಕ್ಷಾ ಕೇಂದ್ರ ಸ್ಥಾಪನೆ" ಕುರಿತು.

**ಓದಲಾಗಿದೆ:**

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ: ಯೋಜನೆ/ಪಿಎಸ್.1/ಹೊಕಾ-ರೇ.ಪ.ಕೇ/6/2016-17, ದಿನಾಂಕ 13/16-04-2016 ಮತ್ತು 27/29-06-2016.

**ಪ್ರಸ್ತಾವನೆ:**

2016-17ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-53 ರಲ್ಲಿ ಈ ಕೆಳಕಂಡಂತೆ ಘೋಷಿಸಲಾಗಿದೆ:

**ಕಚ್ಚಾ ರೇಷ್ಮೆ ಗುಣಮಟ್ಟ ಪ್ರಮಾಣೀಕರಿಸಲು ರೇಷ್ಮೆ ಪರೀಕ್ಷಾ ಕೇಂದ್ರದ ಸ್ಥಾಪನೆ ಇದಕ್ಕೆ 1 ಕೋಟಿ ರೂ.ಗಳ ಅನುದಾನ.**

ಮೇಲೆ ಓದಲಾದ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ದಿನಾಂಕ 13/16-04-2016 ಮತ್ತು 27/29-06-2016ರ ಪತ್ರಗಳಲ್ಲಿ, ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದನೆ ಹಾಗೂ ನೇಕಾರರಿಗೆ ಬೇಕಾಗುವ ಗುಣಮಟ್ಟದ ರೇಷ್ಮೆ ಉತ್ಪಾದನೆ ಪ್ರೋತ್ಸಾಹಿಸಿದಲ್ಲಿ ರೇಷ್ಮೆ ದರದಲ್ಲಿ ಸ್ಥಿರತೆ ತರಲು ಸಾಧ್ಯವಾಗುವುದು. ಈ ನಿಟ್ಟಿನಲ್ಲಿ ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ಕಚ್ಚಾ ರೇಷ್ಮೆ ಪರೀಕ್ಷೆಗೆ ಒಳಪಡಿಸಿ ಶ್ರೇಣಿಕರಿಸಿ ರೇಷ್ಮೆ ಮಾರಾಟಕ್ಕೆ ವ್ಯವಸ್ಥೆಗೊಳಿಸುವುದು ಅಗತ್ಯವಿರುತ್ತದೆ. ರೇಷ್ಮೆ ನೂಲು ಬಿಚ್ಚಾಣಿಕೆದಾರರು ತಾವು ಉತ್ಪಾದಿಸುವ ರೇಷ್ಮೆಯ ಗುಣಮಟ್ಟವನ್ನು ತಿಳಿದುಕೊಳ್ಳಲು ಹಾಗೂ ಬೇಡಿಕೆಗೆ ಅನುಗುಣವಾಗಿ ಅಗತ್ಯ ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದಿಸಲು ಅರಿವು ಮೂಡಿಸಲು ಕಚ್ಚಾ ರೇಷ್ಮೆಯನ್ನು ಪರೀಕ್ಷೆಗೆ ಒಳಪಡಿಸುವುದು ಅಗತ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ರೇಷ್ಮೆ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ.

ಕಚ್ಚಾ ರೇಷ್ಮೆಯ ಗುಣಮಟ್ಟವನ್ನು ನಿರ್ಧರಿಸಲು ರೇಷ್ಮೆ ಪರೀಕ್ಷೆ ಅಗತ್ಯವಾಗಿರುತ್ತದೆ. ರೇಷ್ಮೆ ವಿನಿಮಯ ಕೇಂದ್ರಗಳಲ್ಲಿ ರೇಷ್ಮೆ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದೆ. ರೇಷ್ಮೆ ಮರು ಸುತ್ತುವಿಕೆ, ಟೆನಾಸಿಟಿ, ಗಾತ್ರ ವಿಚಲನೆ, ಸಂಬದ್ಧತೆ ಮುಂತಾದ ಪರೀಕ್ಷೆಗಳನ್ನು ಕೈಗೊಂಡು ರೇಷ್ಮೆ ಗುಣಮಟ್ಟ ಪರೀಕ್ಷಿಸಿ, ಎ,ಬಿ,ಸಿ ಇತ್ಯಾದಿ ದರ್ಜೆಯನ್ನು ನೀಡಲಾಗುತ್ತದೆ. ಇದರಿಂದ ರೀಲರುಗಳು ಅಗತ್ಯತೆಗೆ ಅನುಗುಣವಾಗಿ ರೇಷ್ಮೆ ನೂಲನ್ನು ಉತ್ಪಾದಿಸಲು ಸಹಾಯವಾಗುತ್ತದೆ. ಕಚ್ಚಾ ರೇಷ್ಮೆ ಪರೀಕ್ಷೆಗಾಗಿ ಬೇಕಾಗಿರುವ ಅಗತ್ಯ ಉಪಕರಣಗಳು ಈ ಕೆಳಕಂಡಂತಿವೆ:

1. Winding Machine.
2. Wrap reel (10 end capacity)
3. Kilcha Making Machine
4. Re-Winding Machine(20 end capacity)
5. Electronic Balance(2 kg)(0.1 gms sensitivity)
6. Auto Sorter
7. Table
8. Working Table (wooden / steel) size 5ft x 3 ft (l x b x h).

ರೇಷ್ಮೆ ಪರೀಕ್ಷೆಯಿಂದ ರೇಷ್ಮೆ ಗುಣಮಟ್ಟವನ್ನು ತಿಳಿದುಕೊಳ್ಳಲು ರೀಲರುಗಳಿಗೆ ಅನುಕೂಲವಾಗಿ ದೋಷಗಳನ್ನು ಸರಿಪಡಿಸಿಕೊಂಡು ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದನೆಗೆ ಸಹಕಾರಿಯಾಗುವುದು. ಕಚ್ಚಾ ರೇಷ್ಮೆಯ ಗುಣಮಟ್ಟವನ್ನು ನಿರ್ಧರಿಸಲು ರೇಷ್ಮೆ ಪರೀಕ್ಷೆ .

ಪು.ತಿ.ನೋ. . . .

ಕೈಗೊಳ್ಳುವುದು. ಇದರಿಂದ ರೇಷ್ಮೆ ಗುಣಮಟ್ಟವನ್ನು ತಿಳಿದುಕೊಳ್ಳಲು ರೀಲರುಗಳಿಗೆ ಅನುಕೂಲವಾಗಿ ದೋಷಗಳನ್ನು ಸರಿಪಡಿಸಿಕೊಂಡು ಉತ್ತಮ ಗುಣಮಟ್ಟದ ರೇಷ್ಮೆ ಉತ್ಪಾದನೆಗೆ ಸಹಕಾರಿಯಾಗುವುದು. ಇದರಿಂದ ನೇಕಾರರಿಗೆ ಬೇಕಾಗುವ ಗುಣಮಟ್ಟದ ರೇಷ್ಮೆ ನೂಲನ್ನು ಪಡೆಯಲು ಸಾಧ್ಯವಾಗುತ್ತದೆ.

ರೀಲರುಗಳ ಅವಶ್ಯಕತೆ ಮೇರೆಗೆ ಪ್ರಸ್ತುತ ಸಾಲಿನಲ್ಲಿ ರಾಮನಗರ, ಕೋಲಾರ ಮತ್ತು ವಿಜಯಪುರ (ಬೆಂಗಳೂರು ಗ್ರಾಮಾಂತರ) ಜಿಲ್ಲೆಗಳಲ್ಲಿ ಸ್ಥಾಪಿಸಲಾಗುವುದು. ಸದರಿ ಕೇಂದ್ರಗಳಲ್ಲಿ ರೇಷ್ಮೆ ಪರೀಕ್ಷೆ ಕೈಗೊಳ್ಳಲು ರೇಷ್ಮೆ ಸಹಾಯಕ ನಿರ್ದೇಶಕರು-1, ರೇಷ್ಮೆ ನಿರೀಕ್ಷಕರು-1, ರೇಷ್ಮೆ ಪ್ರದರ್ಶಕರು-1, ರೇಷ್ಮೆ ಪ್ರವರ್ತಕರು-1 ಮತ್ತು ಡಿ ದರ್ಜೆ ನೌಕರರು-1 ಗಳ ಹುದ್ದೆಗಳನ್ನು ನಿಯೋಜಿಸಲಾಗುವುದು. ರೇಷ್ಮೆ ಪರೀಕ್ಷಾ ಕೇಂದ್ರಗಳಲ್ಲಿ ಬೇಕಾಗಿರುವ ಅಗತ್ಯ ಉಪಕರಣಗಳನ್ನು ಇ-ಟೆಂಡರ್ ಮೂಲಕ ಖರೀದಿಸಲಾಗುವುದು. ಸದರಿ ಯೋಜನೆಯ ಅನುಷ್ಠಾನಕ್ಕಾಗಿ ರೂ. 100.00 ಲಕ್ಷಗಳ ಅವಶ್ಯಕತೆ ಇದ್ದು, ಈ ಯೋಜನಾ ವೆಚ್ಚವನ್ನು 2016-17ನೇ ಸಾಲಿನ ಯೋಜನಾ ಲೆಕ್ಕ ಶೀರ್ಷಿಕೆ ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ 2851-00-107-1-80 ರಡಿ ಒದಗಿಸಿರುವ ಅನುದಾನದಿಂದ ಭರಿಸಬಹುದೆಂದು ಪ್ರಸ್ತಾಪಿಸುತ್ತಾ, ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಕೋರಿರುತ್ತಾರೆ.

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, 2016-17ನೇ ಸಾಲಿನ ಆಯವ್ಯಯ ಭಾಷಣದ ಮೇರೆಗೆ ಕಚ್ಚಾ ರೇಷ್ಮೆ ಗುಣಮಟ್ಟ ಪ್ರಮಾಣೀಕರಿಸಲು ರೇಷ್ಮೆ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸುವ ಹೊಸ ಕಾರ್ಯಕ್ರಮ ಅನುಷ್ಠಾನಗೊಳಿಸುವ ಸಲುವಾಗಿ ರಾಮನಗರ, ಕೋಲಾರ ಮತ್ತು ವಿಜಯಪುರ (ಬೆಂಗಳೂರು ಗ್ರಾಮಾಂತರ ಜಿಲ್ಲೆ) ಗಳಲ್ಲಿ ರೇಷ್ಮೆ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯವಿರುವ ರೂ. 100.00 ಲಕ್ಷಗಳನ್ನು ಪ್ರಸಕ್ತ ಸಾಲಿನ ಯೋಜನಾ ಲೆಕ್ಕ ಶೀರ್ಷಿಕೆ ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ 2851-00-107-1-80 ರಡಿ ಒದಗಿಸಿರುವ ರೂ. 5142.00 ಲಕ್ಷಗಳಿಂದ ಭರಿಸಲು ಸರ್ಕಾರವು ನಿರ್ಧರಿಸಿರುವ ಕಾರಣ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ : ತೋಇ 80 ರೇಕೃವಿ 2016,</u>**
**<u>ಬೆಂಗಳೂರು, ದಿನಾಂಕ : 20-07-2016</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, 2016-17ನೇ ಸಾಲಿನ ಆಯವ್ಯಯ ಭಾಷಣದ ಮೇರೆಗೆ ಕಚ್ಚಾ ರೇಷ್ಮೆ ಗುಣಮಟ್ಟ ಪ್ರಮಾಣೀಕರಿಸಲು ರೇಷ್ಮೆ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸುವ ಹೊಸ ಕಾರ್ಯಕ್ರಮ ಅನುಷ್ಠಾನಗೊಳಿಸುವ ಸಲುವಾಗಿ ರಾಮನಗರ, ಕೋಲಾರ ಮತ್ತು ವಿಜಯಪುರ (ಬೆಂಗಳೂರು ಗ್ರಾಮಾಂತರ ಜಿಲ್ಲೆ) ಗಳಲ್ಲಿ ರೇಷ್ಮೆ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯವಿರುವ ರೂ. 100.00 ಲಕ್ಷಗಳನ್ನು 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ ಕರ್ನಾಟಕ ರೇಷ್ಮೆ ವ್ಯವಸಾಯ ಯೋಜನೆ 2851-00-107-1-80 ರಡಿ ಒದಗಿಸಿರುವ ರೂ. 5142.00 ಲಕ್ಷಗಳಿಂದ ಭರಿಸತಕ್ಕದ್ದು.

ಸದರಿ ಕೇಂದ್ರಗಳಲ್ಲಿ ರೇಷ್ಮೆ ಪರೀಕ್ಷೆ ಕೈಗೊಳ್ಳಲು ರೇಷ್ಮೆ ಸಹಾಯಕ ನಿರ್ದೇಶಕರು-1, ರೇಷ್ಮೆ ನಿರೀಕ್ಷಕರು-1, ರೇಷ್ಮೆ ಪ್ರದರ್ಶಕರು-1, ರೇಷ್ಮೆ ಪ್ರವರ್ತಕರು-1 ಮತ್ತು ಡಿ ದರ್ಜೆ ನೌಕರರು-1 ಗಳ ಹುದ್ದೆಗಳನ್ನು ನಿಯೋಜಿಸಲು ಕ್ರಮಕೈಗೊಳ್ಳುವುದು. ರೇಷ್ಮೆ ಪರೀಕ್ಷಾ ಕೇಂದ್ರಗಳಲ್ಲಿ ಬೇಕಾಗಿರುವ ಅಗತ್ಯ ಉಪಕರಣಗಳನ್ನು ಇ-ಟೆಂಡರ್ ಮೂಲಕ ಮತ್ತು ನಿಯಮಗಳನ್ವಯ ಖರೀದಿಸುವುದು. ಈ ಕಾರ್ಯಕ್ರಮದ ಅನುಷ್ಠಾನಕ್ಕೆ ವಿಸ್ತೃತ

ಮು.ತಿ.ನೋ. . . .

ಮಾರ್ಗಸೂಚಿಯನ್ನು ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಹೊರಡಿಸುವುದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 23 ಎಫ್ಆರ್‌ಪಿ 2016, ದಿನಾಂಕ 05-07-2016 ರ ಸಹಮತಿ ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 314 ವೆಚ್ಚ-4/2016, ದಿನಾಂಕ 14-06-2016 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಆರ್. ಎಲ್. ಚಿನ್ನಮ್ಮ 20/7
(ಆರ್.ಎಲ್. ಚಿನ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ (ರೇಷ್ಮೆ)
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**ಇವರಿಗೆ:**

1. ಮಹಾಲೇಖಪಾಲರು, (ಜಿ&ಎಸ್ಎಸ್ಎ)/(ಇ&ಆರ್ಎಸ್ಎ)/(ಎ&ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ 1 & 2, ವಿಧಾನ ಸೌಧ, ಬೆಂಗಳೂರು
5. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಹಿರಿಯ ನಿರ್ದೇಶಕರು/ನಿರ್ದೇಶಕರು, ಯೋಜನಾ ಇಲಾಖೆ, ಯೋಜನಾ ಸಂಯೋಜನಾ ಮತ್ತು ಮಾಹಿತಿ ವಿಭಾಗ/ಪಿ.ಎಫ್.ಆರ್. ವಿಭಾಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಆಂತರಿಕ ಆರ್ಥಿಕ ಸಲಹೆಗಾರರು ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಹಾಗೂ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
10. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
11. ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
12. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು (ರೇಷ್ಮೆ), ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
14. ಶಾಖಾ ರಕ್ಷಾ ಕಡತ.